ಅ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ 10 ಸಣ್ಣ ನೀರಾವರಿ ಕೆರೆಗಳಿದ್ದು ಅವುಗಳ ವಿಸ್ತಾರ ಮತ್ತು ಅಚ್ಚುಕಟ್ಟು 2151 ಹೆಕ್ಟೇರ್. ಆ ಪೈಕಿ 98-99 ರಲ್ಲಿ 177.70 ಹೆಕ್ಟೇರು 99-2000 ರಲ್ಲಿ 153.70 ಹೆಕ್ಟೇರು ರಷ್ಟು ಭೂಮಿಗೆ ನೀರಾವರಿ ಒದಗಿಸಲಾಗಿದೆ.

ಹೊನ್ನಳ್ಳಿ ಮತ್ತು ಸಿರ್ಗಾಪೂರ ಕೆರೆಗಳು 2000 ರಲ್ಲಿ ಪೂರ್ಣಗೊಂಡಿದ್ದು ನೀರಾವರಿಗೆ ಉಪಯೋಗಿಸಲಾಗುತ್ತಿದೆ.

ಅಲಗೋಡ ಕೆರೆ ಆಗಸ್ಟ್ 1999ರಲ್ಲಿ ಒಡ್ಡು ಒಡೆದಿರುವುದರಿಂದ ನೀರು ಸಂಗ್ರಹಣೆಯಾಗಿಲ್ಲ. ಈ ವರ್ಷ ಪೂರ್ಣ ನಿರ್ಮಾಣವಾಗಿದ್ದು ನೀರಾವರಿ ಆಗಲಿದೆ.

ಕೆರೆಗಳು ವಾರ್ಷಿಕ ನಿರ್ವಹಣೆ ಅನುದಾನ ಸಾಕಾಗುತ್ತಿಲ್ಲವಾದ್ದರಿಂದ ಎಲ್ಲಾ ಕೆರೆಗಳನ್ನು ಒಮ್ಮೇಲೆ ಸುಸ್ಥಿತಿಗೆ ತರಲು ಸಾಧ್ಯವಾಗದ ಕಾರಣ ಹಂತ ಹಂತವಾಗಿ ಸುಧಾರಣೆ ಮಾಡಿ ನಿಗಧಿತ ಗುರಿ ಸಾಧಿಸಲು ಸಾಧ್ಯವಾದ ಎಲ್ಲಾ ಪ್ರಯತ್ನ ಮಾಡಲಾಗುವುದು.

ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಜಲಸಂವರ್ಧನೆ ಯೋಜನೆ

2388(2912) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಲ ಸಂವರ್ಧನೆಗಾಗಿ ನಿಗಧಿಪಡಿಸಿದ ಕೆರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಜಲಸಂವರ್ಧನೆಗಾಗಿ ಗುರುತಿಸಿರುವ ಕೆರೆಗಳ ಸಂಖ್ಯೆ ಎಷ್ಟು ; ಗ್ರಾಮವಾರು ಕೆರೆಗಳ ವಿವರ ನೀಡುವುದು.

ಇ) ಇದಕ್ಕೆ ತಗಲುವ ವೆಚ್ಚವೆಷ್ಟು; ಸದರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.